‘ಏನೂ ಬೇಡ. ಅವ್ರೇ ಬೇಕಾಗಿತ್ತು’

‘ಪರವಾಗಿಲ್ಲ ಹೇಳಿ, ನಾವು ಮಾಡಿಕೊಡುತ್ತೇವೆ’

ಬ್ಯಾಂಕಲ್ಲಿ ಗ್ರಾಹಕರಿಲ್ಲದೆ ಸ್ಟಾಫ್ ಆರಾಮವಾಗಿದ್ದರು. ಸಾವಿತ್ರಿ ಚಣ ಯೋಚಿಸಿದಳು.

‘ಹಣ ಕೊಡ್ಬೇಕಿತ್ತು’

‘ಯಾರಿಗೆ?’

‘ಸಾರ್‌ಗೆ’

ಸ್ಟಾಫ್ ಒಬ್ಬರನ್ನೊಬ್ಬರು ನೋಡಿದರು. ಅವರವರೇ ಮಾತಾಡಿಕೊಂಡರು.

‘ಅವರ ಅಕೌಂಟಿಗೆ ಕಟ್ಟಿ’ ಒಬ್ಬ ಹೇಳಿದ.

‘ಬೇಡ. ಅವರಿಗೇ ಕೊಡುತ್ತೇನೆ’

‘ಅವರ ಅಕೌಂಟ್ ನಂಬರ್ ಕೊಡುತ್ತೇವೆ. ನೀವೇ ಕಟ್ಟಿ. ವಾಪಾಸ್ ಯಾಕೆ ತೆಗೆದುಕೊಂಡು ಹೋಗ್ತೀರಿ?’

ಸಾವಿತ್ರಿಗೆ ಸರಿ ಎನ್ನಿಸಿತು. ಹಣ ಮನೆಯಲ್ಲಿ ಇಟ್ಟುಕೊಳ್ಳುವುದು ಸರಿಯಲ್ಲವೆಂದು ತೋರಿತು.

ಮ್ಯಾನೇಜರ್ ಅಕೌಂಟ್ ನಂಬರ್ ಕೊಟ್ಟು, ಮಗಳ ಹತ್ತಿರ ಚಲನ್ ಭರ್ತಿ ಮಾಡಿಸಿ ಹಣ ಕಟ್ಟಿಸಿಕೊಂಡರು. ಸಾವಿತ್ರಿಯ ಹೆಬ್ಬೆಟ್ಟು ಹಾಕಿಸಿಕೊಳ್ಳಲು ಮರೆಯಲಿಲ್ಲ. ಸಾವಿತ್ರಿ ಹೊರಟ ಕೂಡಲೇ ಅವರಿಗೆಲ್ಲ ಹುಲಿಯನ್ನು ಹೊಂಡಕ್ಕೆ ಬೀಳಿಸಿದಷ್ಟು ಖುಷಿಯಾಯಿತು. ಮ್ಯಾನೇಜರ್‌ಗೇ ದುಡ್ಡು ಕೊಡುವುದೆಂದರೆ? ಇದರಲ್ಲಿ ಏನೋ ಕರಾಮತ್ತು ಇದೆ! ತಾನು ಸಜ್ಜನ, ಪ್ರಾಮಾಣಿಕ ಎಂದು ತೋರಿಸಿಕೊಳ್ಳುತ್ತಿದ್ದವರ ಮುಖವಾಡ ಕಳಚಿ ಬೀಳುತ್ತಿದೆ. ಸಾಲ ಕೊಟ್ಟಿದ್ದಕ್ಕೆ ಬೇಡಿಕೆ ಇಟ್ಟಿದ್ದಾರೆ. ಅವಳು ಪಾಪ ಏನೇನೋ ಮಾಡಿ ಹಣ ಕೊಡಲು ಬಂದಿದ್ದಾಳೆ. ಮ್ಯಾನೇಜರ್ ಇಲ್ಲದ ಕಾರಣ ವ್ಯವಹಾರ ಬಯಲಾಯಿತು. ಯಾವ ಹುತ್ತದಲ್ಲಿ ಯಾವ ಹಾವೋ ಎಂದೆಲ್ಲ ವ್ಯಂಗ್ಯವಾಡಿದರು. ಕೆಲಸದ ಅವಧಿ ಮುಗಿದ ನಂತರ ಸ್ಟಾಫ್ ಹೊರಟು ಹೋದರು. ಇನ್ ಚಾರ್ಜ್ ಮ್ಯಾನೇಜರ್ ಸೇತುಮಾಧವ್ ಒಬ್ಬರೇ ಇದ್ದರು. ಎಲ್ಲರೂ ಆಡುವುದನ್ನು ಕೇಳಿಸಿಕೊಂಡಿದ್ದ ಅವರು ಬೇರೆಯೇ ಯೋಚನೆ ಮಾಡುತ್ತಿದ್ದರು. ಸೇತುಮಾಧವ್ ಮತ್ತು ಗ್ರಾಮೀಣಾಭಿವೃದ್ಧಿ ಅಧಿಕಾರಿ ರೂಮ್‌ಮೇಟ್‌ಗಳಾಗಿದ್ದರು. ಆತ ಟ್ರಾನ್ಸ್‌ಫರ್ ಮಾಡಿಕೊಂಡು ಹೋಗಲು ಕೃಷ್ಣಪ್ಪರೇ ಕಾರಣ ಎನ್ನುವ ಸಿಟ್ಟಿತ್ತು. ಕೃಷ್ಣಪ್ಪಗೆ ಬುದ್ಧಿ ಕಲಿಸಲು ಇದು ಒಳ್ಳೆಯ ಅವಕಾಶ ಎಂದವರಿಗೆ ತೋಚಿತು. ಪ್ರಾದೇಶಿಕ ಕಚೇರಿಯಲ್ಲಿ ಸೇತುಮಾಧವ್‌ಗೆ ಪರಿಚಯದವರಿದ್ದರು. ಅವರಿಗೆ ಫೋನ್ ಮಾಡಿದರು. ಮ್ಯಾನೇಜರ್‌ರವರ ಖಾತೆಗೆ ಸಾಲಗಾರಲ್ಲೊಬ್ಬಳು ಹಣ ಜಮಾ ಮಾಡಿದ್ದು, ಮ್ಯಾನೇಜರ್ ಅನುಚಿತ ರೀತಿಯಲ್ಲಿ ಅವಳಿಗೆ ಸಹಾಯ ಮಾಡಿದ್ದನ್ನು ತಿಳಿಸಿದರು. ಮ್ಯಾನೇಜರ್ ರಜೆಯಲ್ಲಿರುವ ವಿಷಯ ತಿಳಿದ ಆತ ತನಿಖೆಗೆ ಕೂಡಲೇ ವ್ಯವಸ್ಥೆ ಮಾಡುವ ಭರವಸೆ ನೀಡಿದ.

ಎರಡು ದಿನಗಳಲ್ಲೇ ತನಿಖಾಧಿಕಾರಿಯ ಆಗಮನವಾಯಿತು. ಆತ ಸಾವಿತ್ರಿ ಬಗ್ಗೆ ತಿಳಿದುಕೊಂಡು ಸಾಲದ ಖಾತೆಯನ್ನು ಪರಿಶೀಲಿಸಿದರು. ಆಕೆ ಮ್ಯಾನೇಜರ್ ಖಾತೆಗೆ ಹಣ ಕಟ್ಟಿದ ಚಲನನ್ನು ವಶಕ್ಕೆ ಪಡೆದು, ಪಶುವೈದ್ಯರನ್ನು ಭೇಟಿ ಮಾಡಿ ಅವರ ಹೇಳಿಕೆ ದಾಖಲಿಸಿ, ಅಯ್ನೋರ ಮನೆಗೆ ಹೋಗಿ ಮ್ಯಾನೇಜರೇ ಸ್ವತಃ ವ್ಯವಹಾರ ಕುದುರಿಸಿದ್ದನ್ನು ಖಾತ್ರಿ ಪಡಿಸಿಕೊಂಡರು. ಕ್ಲೈಮ್ ವಿಭಾಗದಲ್ಲಿ ಸೆಟ್ಲ್ ಮಾಡಲು ಇನ್ಶುರೆನ್ಸ್ ಕಂಪನಿಗೆ ಒತ್ತಾಯಿಸಿದ ಮಾಹಿತಿಯೂ ಸಿಕ್ಕಿತು.

ತೀವ್ರ ಗತಿಯಲ್ಲಿ ತನಿಖೆ ನಡೆದುದು ಬ್ಯಾಂಕ್ ಸಿಬ್ಬಂದಿಯ ಆಶ್ಚರ್ಯಕ್ಕೆ ಕಾರಣವಾಯಿತು. ಅವರಿಗೆ ಮ್ಯಾನೇಜರ್‌ಗೆ ತೊಂದರೆ ಕೊಡುವ ಉದ್ದೇಶವಿರಲಿಲ್ಲ. ತೋರಿಸಿಕೊಳ್ಳುವಷ್ಟು ಸ್ವಚ್ಛ ಅಲ್ಲ ಎನ್ನುವುದಷ್ಟೇ ಬೇಕಿತ್ತು. ಪ್ರಾದೇಶಿಕ ಕಚೇರಿಗೆ ತಿಳಿಸಿದವರು ಯಾರು? ಬ್ಯಾಂಕಿನವರೇ, ಹೊರಗಿನವರೇ ಯಾರಿರಬಹುದೆಂದು ಅಶ್ಚರ್ಯಪಟ್ಟರು. ತನಿಖಾಧಿಕಾರಿಯನ್ನು ರಾಜು ಸಾವಿತ್ರಿ ಮನೆಗೆ ಕರೆದುಕೊಂಡು ಹೋಗಿದ್ದ. ಸಾವಿತ್ರಿಗೆ ಅವರನ್ನು ಕಂಡು ಅಶ್ಚರ್ಯವಾಯಿತು. ರಾಜು ಬ್ಯಾಂಕಿನವರು, ನಿನ್ನ ಹತ್ತಿರ ಏನೋ ಕೇಳಬೇಕಂತೆ ಎಂದ.

ಸಾವಿತ್ರಿ ಮ್ಯಾನೇಜರ್ ಖಾತೆಗೆ 5 ಸಾವಿರ ಹಣ ಕಟ್ಟಿದ್ದನ್ನು ಒಪ್ಪಿಕೊಂಡಳು. ‘ಯಾಕೆ ಕಟ್ಟಿದೆ?’ ಎಂದವರು ಮರಳಿ, ಮರಳಿ ಕೇಳಿದರು. ಸಾವಿತ್ರಿಗೆ ಏನು ಹೇಳಬೇಕೆಂದೇ ತೋಚಲಿಲ್ಲ. ಸುಮ್ಮನೇ ಇದ್ದಳು. ತನಿಖಾಧಿಕಾರಿ ನೀನೇ ಕಟ್ಟಿದ್ದು ಎಂದು ಬರೆದು ಕೊಡಬೇಕು ಎಂದರು. ಸಾವಿತ್ರಿಗೆ ಇಷ್ಟವಿರಲಿಲ್ಲ. ರಾಜು ಒತ್ತಾಯ ಮಾಡಿದ. ‘ನಿನಗೇನೂ ತೊಂದರೆ ಆಗುವುದಿಲ್ಲ. ಬರೆದು ಕೊಡು’ ಎಂದ. ಸಾವಿತ್ರಿಗೆ ಬೇರೆ ದಾರಿ ಇರಲಿಲ್ಲ. ಅವರು ಹೇಳಿದಂತೆ ಮಗಳ ಕೈಯಲ್ಲಿ

